ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ ,ಮಲ್ಲತ್ತಹಳ್ಳಿ, ಬೆಂಗಳೂರು-560056 ದೂ: 080-23183311/ 23183312
Email:kbbp-bengaluru@ka.gov.in

---

ಕುಭಾಪ್ರಾ/23 /ಅಂತ.ಕನ್ನಡ.ತರಬೇತಿ/2021-22 ದಿನಾಂಕ: 16-08-2021

## ಪ್ರಕಟಣೆ

## ಅಂತರಜಾಲದಲ್ಲಿ ಕನ್ನಡ ಬರವಣಿಗೆ ಹಾಗೂ ಅನುವಾದ: ಪ್ರಾಯೋಗಿಕ ತರಬೇತಿ

1. ಅಂತರಜಾಲದಲ್ಲಿ ಕನ್ನಡ ಬರವಣಿಗೆ ಹಾಗೂ ಅನುವಾದಕ್ಕೆ ಸಂಬಂಧಿಸಿ ಎರಡು ದಿನಗಳ ತರಬೇತಿ ಶಿಬಿರಗಳನ್ನು ರಾಜ್ಯದ ವಿವಿಧ ಜಿಲ್ಲಾಕೇಂದ್ರಗಳಲ್ಲಿ ನಡೆಸಲಾಗುವುದು..
2. ಕಂಪ್ಯೂಟರ್ ಕೇಂದ್ರಗಳಲ್ಲಿ/ಪ್ರಯೋಗಾಲಯಗಳಲ್ಲಿ ತರಬೇತಿ ನಡೆಯಬೇಕಾಗಿದ್ದು, ಕಂಪ್ಯೂಟರ್/ ಇಂಟರ್ ನೆಟ್ ಇತ್ಯಾದಿ ವೆಚ್ಚಗಳಿಗಾಗಿ ಅಭ್ಯರ್ಥಿಗಳು ರೂ.1000/- ಶುಲ್ಕವನ್ನು ಸ್ಥಳೀಯವಾಗಿ ಸಂಬಂಧಿಸಿದ ಕಂಪ್ಯೂಟರ್ ಕೇಂದ್ರಗಳಿಗೆ/ ಪ್ರಯೋಗಾಲಯಗಳಿಗೆ ನೇರವಾಗಿ ಪಾವತಿಸಬೇಕಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದರೆ, ಪರೀಕ್ಷೆ, ಸಂದರ್ಶನ ಇತ್ಯಾದಿ ಪ್ರಕ್ರಿಯೆಗಳ ಮೂಲಕ ಜಿಲ್ಲಾವಾರು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಯಾ ಜಿಲ್ಲೆಗಳಿಂದ ಸ್ವೀಕೃತವಾಗುವ ಅರ್ಜಿಗಳನ್ನು ಆಧರಿಸಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಕೇಂದ್ರಗಳ ಮಾಹಿತಿಯನ್ನು ತಿಳಿಸಲಾಗುವುದು. ಅಭ್ಯರ್ಥಿಗಳು ಶುಲ್ಕ ಪಾವತಿಸಿದ ಬಗ್ಗೆ ಕಂಪ್ಯೂಟರ್ ಕೇಂದ್ರಗಳು ನೀಡುವ ಮಾಹಿತಿಯನ್ನು ಆಧರಿಸಿ ಶಿಬಿರಕ್ಕೆ ಹಾಜರಾಗಲು ಆಯಾ ಅಭ್ಯರ್ಥಿಗಳಿಗೆ ಇಮೇಲ್ ಮೂಲಕ ಸೂಚನೆಯನ್ನು ಕಳುಹಿಸಲಾಗುವುದು.
3. ಪ್ರತಿ ಅಭ್ಯರ್ಥಿಗೆ 2 ದಿನಗಳಿಗೆ ಒಟ್ಟು ರೂ. 1000/- ಸ್ಟೈಪೆಂಡ್ ಪಾವತಿ ಮಾಡಲಾಗುವುದು. ಕಡ್ಡಾಯವಾಗಿ 2 ದಿನ ಪೂರ್ತಿ ಹಾಜರಾತಿ ಇದ್ದವರಿಗೆ ಮಾತ್ರ ಸ್ಟೈಪೆಂಡ್ ಪಾವತಿ ಮಾಡಲಾಗುವುದು.
4. ಶಿಬಿರದ ಫಲವಾಗಿ ಬರೆದ ಹಾಗೂ ತಜ್ಞರಿಂದ ಆಯ್ಕೆಯಾಗುವ ಲೇಖನಗಳಿಗೆ, ಲೇಖನವೊಂದಕ್ಕೆ ರೂ. 500/- ರಂತೆ ಗೌರವ ಧನ ಪಾವತಿಸಲಾಗುವುದು. (ಪ್ರತಿ ಶಿಬಿರಾರ್ಥಿಗೆ ಗರಿಷ್ಠ 2 ಲೇಖನಗಳಿಗೆ ಮಾತ್ರ ಗೌರವಧನ ಪಾವತಿಸಲಾಗುವುದು)
5. ಪ್ರತಿ ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು ಸಿದ್ಧಪಡಿಸುವ ಲೇಖನ/ಬರಹಗಳಲ್ಲಿ ಆಯ್ದ ಮೂರು ಅತ್ಯುತ್ತಮ ಲೇಖನ/ಬರಹಗಳಿಗೆ ಮೌಲ್ಯಮಾಪಕರ ಶಿಫಾರಸನ್ನು ಆಧರಿಸಿ ನಗದು ಬಹುಮಾನ: ರೂ. 3000/-, 2000/-, 1000/-ದಂತೆ ನೀಡಲಾಗುವುದು.
6. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ಶಿಬಿರಾರ್ಥಿಗಳಿಗೆ ಪ್ರಾಧಿಕಾರದಿಂದ ಪ್ರಮಾಣಪತ್ರವನ್ನು ನೀಡಲಾಗುವುದು.

ಅರ್ಜಿ**ನಮೂನೆಗಾಗಿ** ಪ್ರಾಧಿಕಾರದ ಜಾಲತಾಣವನ್ನು https://kuvempubhashabharathi.karnataka.gov.in/ **ಈ ವಿಳಾಸದಲ್ಲಿ** ಸಂಪರ್ಕಿಸುವಂತೆ ಕೋರಿದೆ. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಪ್ರಾಧಿಕಾರವನ್ನು ಸಂಪರ್ಕಿಸಬಹುದು.

ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಜ್ಞಾನಭಾರತಿ ಅಂಚೆ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ, ಬೆಂಗಳೂರು-560056 ದೂ: 080-23183311/ 23183312 Email:kbbp-bengaluru@ka.gov.in

ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು